ಅಕ್ಕಿಗಿರಣಿಗಳಿಗೆ ವಿಧಿಸಿದ ವಿದ್ಯುತ್ ಶುಲ್ಕ

1714 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಅಕ್ಕಿ ಗಿರಣಿಗಳಿಗೆ ಉಪಯೋಗಿಸುತ್ತಿರುವ ವಿದ್ಯುತ್ ದರವನ್ನು ದಿನಾಂಕ : 2-4-97ರ ಅಧಿಸೂಚನೆಯಂತೆ ಎಲ್.ಟಿ. ಸ್ಥಾವರಗಳ ವರ್ಗ ಮಿತಿಯನ್ನು 100 ಹೆಚ್.ಪಿ. ಯಿಂದ 67 ಹೆಚ್.ಪಿ.ಗೆ ಇಳಿಸಿದ್ದು, ದಿನಾಂಕ 1-7-97 ರಿಂದ ಮತ್ತೆ ಅದನ್ನು 67 ರಿಂದ 100 ಹೆಚ್.ಪಿ. ವರೆಗೆ ಹೆಚ.ಟಿ. ಯನ್ನು ಮಾರ್ಪಡಿಸಿರುವುದು ಅಕ್ಕಿ ಗಿರಣಿಗಳನ್ನು ತೊಂದರೆಗೀಡು ಮಾಡಿರುವ ವಿಷಯವು ಸರ್ಕಾರದ ಗಮನದಲ್ಲಿದೆಯೇ?

ಆ) ದಿನಾಂಕ 30-6-97ರ ಅಧಿಸೂಚನೆಯಂತೆ ಅಕ್ಕಿ ಗಿರಣಿಯವರು ಎಲ್.ಟಿ.-5 ಶುಲ್ಕ ಪದ್ಧತಿಯಲ್ಲಿ ಬರುವವರಾಗಿದ್ದು ದಿನಾಂಕ 1-7-1997 ರಿಂದ ಇದನ್ನು ಜಾಸ್ತಿ ಮಾಡಿದ್ದು ಮುಂಚಿನಂತೆಯೇ ಅಂದರೆ 30-6-1997ರ ಅಧಿಸೂಚನೆಯಂತೆ ಮುಂದುವರಿಯಲು ಅಕ್ಕಿ ಗಿರಣಿಗಳಿಗೆ ಸರ್ಕಾರವು ಅವಕಾಶ ಮಾಡದಿರುವ ಕುರಿತು ತೊಂದರೆಗಳೇನು?

ಇ) ದಿನಾಂಕ 2-4-97 ರಿಂದ ಜಾರಿಗೆ ಬಂದಿರುವ ಎಲ್.ಟಿ. ಮಿತಿ 100 ಹೆಚ್.ಪಿ. ವರೆಗೆ ಇದನ್ನೇ ಮುಂದುವರೆಸಿ ಅಕ್ಕಿ ಗಿರಣಿಗಳಿಗೆ ಸಹಾಯ ಮಾಡಬಹುದೇ?

ಶ್ರೀ ಶರಣಪ್ಪ ಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು) :

ಅ) ದಿನಾಂಕ 24-4-1997 ರಿಂದ ಜಾರಿಗೆ ಬರುವಂತೆ ಹೊಸದಾಗಿ ವಿದ್ಯುತ್ ಸಂಪರ್ಕ ಪಡೆಯದ ಎಲ್ಲಾ ಎಲ್.ಪಿ.ಟಿ. ಸ್ಥಾವರಗಳ ವರ್ಗ ಮಿತಿಯನ್ನು 67 ಹೆಚ್.ಪಿ. ಇಳಿಸಿದೆ. ಆದರೆ ಈ ಮಿತಿಯು ಹಾಲಿ ಇರುವ ಎಲ್.ಟಿ. ಇಳಿಸಿದೆ. ಆದರೆ ಈ ಮಿತಿಯು ಹಾಲಿ ಇರುವ ಎಲ್.ಟಿ. ಸ್ಥಾವರಗಳಿಗೆ ಅನ್ವಯಿಸುವುದಿಲ್ಲ.

ವಿದ್ಯುತ್ ಕೊರತೆ ಮತ್ತು ವಿದ್ಯುತ್ ಖರೀದಿ ವೆಚ್ಚದಲ್ಲಿ ಹೆಚ್ಚಳವಾಗಿರುವ ಈಗಿನ ಪರಿಸ್ಥಿತಿಯಲ್ಲಿ ಪ್ರಸರಣೆ ಮತ್ತು ವಿತರಣೆಯಲ್ಲಿನ ನಷ್ಟವನ್ನು ಕಡಿಮೆ ಮಾಡುವುದು ಅತ್ಯಗತ್ಯವಾಗಿದೆ. ವಿದ್ಯುತ್ ಸ್ಥಾವರಗಳಿಗೆ ಹೆಚ್.ಟಿ. ವಿದ್ಯುತ್ ಸಂಪರ್ಕವನ್ನು ಕಲ್ಪಿಸುವುದರಿಂದ ವಿದ್ಯುತ್ ವಿತರಣೆಯಲ್ಲಿ ಉಂಟಾಗುವ ನಷ್ಟವನ್ನು ಕಡಿಮೆ ಮಾಡಬಹುದಾಗಿದೆ. ಎಲ್.ಟಿ. ಕಾರ್ಖಾನೆಗಳಿಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲು ಬೇಕಾಗುವ ಟ್ರಾನ್ಸ್‌ಫಾರ್ಮರ್ ವಿದ್ಯುತ್ ಲೈನ್ ಮುಂತಾದ ಕಾರ್ಯಗಳಿಗೆ ಮಂಡಳಿಯು ಹೆಚ್ಚುವರಿ ಬಂಡವಾಳವನ್ನು ಹಾಕಬೇಕಾಗುತ್ತದೆ. ಹೆಚ್.ಟಿ. ಆಧಾರದ ಮೇಲೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸುವುದರಿಂದ ವಿದ್ಯುತ್ ಗುಣಮಟ್ಟದಲ್ಲಿ ಸುಧಾರಣೆ ಆಗುತ್ತದೆ ಹಾಗೂ ಎಲ್.ಟಿ. ವಿತರಣಾ ಮಾರ್ಗಗಳಲ್ಲಿ ಉಂಟಾಗುವ ಅನಿರೀಕ್ಷಿತ ವ್ಯತ್ಯಯಗಳಿಂದ ಹಾಗೂ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳಲ್ಲಿನ ಹೆಚ್ಚಿನ ಹೊರೆ ಮತ್ತು ಟ್ರಾನ್ಸ್‌ಫಾರ್ಮರ್‌ಗಳ ವಿಫಲತೆಯಿಂದ ಆಗಬಹುದಾದ ವಿದ್ಯುತ್ ಅಡಚಣೆಗಳು ತಪ್ಪುತ್ತವೆ. ರಾಜಸ್ತಾನ, ಮಹಾರಾಷ್ಟ್ರ, ಆಂಧ್ರಪ್ರದೇಶ ರಾಜ್ಯಗಳಲ್ಲಿಯೂ ಸಹ

ಎಲ್.ಟಿ. ಸ್ಥಾವರಗಳ ಮಿತಿಯನ್ನು 67 ಹೆಚ್.ಪಿ. : 75 ಹೆಚ್.ಪಿ.ಗೆ ಇಡಲಾಗಿದೆ. ಈ ಕಾರಣಗಳಿಂದ, 67 ಹೆಚ್.ಪಿ. ಮತ್ತು ಇದಕ್ಕಿಂತ ಮೇಲ್ಪಟ್ಟ ಪ್ರಮಾಣದಲ್ಲಿ ವಿದ್ಯುತ್ ಪಡೆಯುವ ಸ್ಥಾವರಗಳಿಗೆ ಹೆಚ್.ಟಿ. ಯಲ್ಲಿ ವಿದ್ಯುತ್ ಪಡೆಯಬೇಕೆಂಬ ಬಗ್ಗೆ ಮಂಡಳಿಯು ವಿದ್ಯುತ್ ಸರಬರಾಜು ನಿಯಮಗಳಿಗೆ ತಿದ್ದುಪಡಿಯನ್ನು ಮಾಡಿದೆ.

ಆ) ಕಳೆದ ವರ್ಷದಿಂದೀಚೆಗೆ ವಿದ್ಯುತ್ ಖರೀದಿ ವೆಚ್ಚದಲ್ಲಿ ಹೆಚ್ಚಳವಾಗಿರುತ್ತದೆ. ಮಂಡಳಿಯು ಕೆ.ಪಿ.ಸಿ., ಎನ್.ಟಿ.ಪಿ.ಸಿ.,ಎಂ.ಎ.ಪಿ.ಎಸ್., ಎನ್.ಎಲ್.ಸಿ. ಮತ್ತು ಆರ್.ಟಿ.ಪಿ.ಎಸ್. ವಿದ್ಯುತ್, ಉತ್ಪಾದನಾ ಕೇಂದ್ರಗಳಿಂದ ವಿದ್ಯುತ್ತನ್ನು ಹೆಚ್ಚಿನ ದರದಲ್ಲಿ ಪಡೆಯುತ್ತಿರುವುದರಿಂದಲೂ, ಸಾಲದ ಮೇಲಿನ ಬಡ್ಡಿಯ ಪಾವತಿಯಲ್ಲಿ ಕೂಡ ಶೇಕಡಾ 25 ರಷ್ಟು ಹೆಚ್ಚಳವಾಗಿರುವುದರಿಂದಲೂ ಹಾಗೂ ನಿರ್ವಹಣೆ ಮತ್ತು ಪಾಲನ ವೆಚ್ಚದಲ್ಲಿ ಶೇಕಡಾ 10 ರಷ್ಟು ಹೆಚ್ಚಳ ವಾಗಿರುವುದರಿಂದಲೂ, ಮಂಡಳಿಗೆ ವಿದ್ಯುತ್ ದರಗಳನ್ನು ಹೆಚ್ಚಿಸುವುದು ಅನಿವಾರ್ಯವಾಯಿತು. ಆದುದರಿಂದ 30-6-97 ರಲ್ಲಿದ್ದ ವಿದ್ಯುತ್ ಶುಲ್ಕವನ್ನು ಮುಂದುವರಿಸಲು ಸಾಧ್ಯವಾಗುವುದಿಲ್ಲ.

ಇ) ಪ್ರಶ್ನೆಯ 'ಆ' ಭಾಗಕ್ಕೆ ನೀಡಿರುವ ಉತ್ತರದಲ್ಲಿ ತಿಳಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಇದು ಸಾಧ್ಯವಾಗುವುದಿಲ್ಲ.

ವಿದ್ಯುಚ್ಛಕ್ತಿ ಮಂಡಳಿ ಹೆಚ್.ಟಿ.ಯ ಕಾನೂನು ಮಾರ್ಪಾಡು

1715 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 50 ಕೆ.ಡಬ್ಲ್ಯೂ :65 ಹೆಚ್.ಪಿ. ಮೇಲ್ಪಟ್ಟು ವಿದ್ಯುಚ್ಛಕ್ತಿಯನ್ನು ಪಡೆಯುವವರು ಹೆಚ್.ಟಿ. ಸ್ಥಾವರವಾಗಿಯೇ ಪಡೆಯಬೇಕೆಂದು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯವರು ಕಡ್ಡಾಯ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಸಣ್ಣ ಕೈಗಾರಿಕಾ ಉದ್ಯಮಿಗಳು ಹಾಗೂ ಸಾಮಾನ್ಯ ವರ್ಗದ ಜನರು ಬಾಡಿಗೆಯಾಗಿ ಕೈಗಾರಿಕಾ ಮಳಿಗೆಗಳನ್ನು ಪಡೆದವರು 15 X 10 ಜಾಗ ಒದಗಿಸಲು ಹಾಗೂ ಪರಿವರ್ತಕ ಲೈನನ್ನು ಹಾಕಲು ಬಂಡವಾಳ. ಒದಗಿಸಲು ಸಾಧ್ಯವೆ, ಈ ಬಗ್ಗೆ ಸರ್ಕಾರದ ಕ್ರಮವೇನು?

ಇ) ಈ ಹಿಂದೆ ಇದ್ದ ಕಾನೂನನ್ನು ಮುಂದುವರಿಸಿಕೊಂಡು ಹೋಗಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಶರಣಪ್ಪ ಬಸಪ್ಪ ದರ್ಶನಪುರ್ (ಇಂಧನ ರಾಜ್ಯ ಸಚಿವರು) :

ಅ) ಹೌದು. 50 ಕೆ.ಡಬ್ಲ್ಯೂ :67 ಹೆಚ್.ಪಿ. ಮತ್ತು ಇದಕ್ಕೆ ಮೇಲ್ಪಟ್ಟು ವಿದ್ಯುಚ್ಛಕ್ತಿ ಸರಬರಾಜನ್ನು ಪಡೆಯುವ ಎಲ್ಲಾ ಸ್ಥಾವರಗಳು ಹೆಚ್.ಟಿ. ಯಲ್ಲಿಯೇ ವಿದ್ಯುತ್ ಸಂಪರ್ಕವನ್ನು ಪಡೆಯ ಬೇಕಾಗಿದೆ. ಈ ಮಿತಿಯು ಹಾಲಿ ಇರುವ ಎಲ್.ಟಿ. ಸ್ಥಾವರಗಳಿಗೆ ಅನ್ವಯಿಸುವುದಿಲ್ಲ.